ಶುದ್ಧ ಪ್ರತಿ

# ದಾವಣಗೆರೆ ವಿಶ್ವವಿದ್ಯಾನಿಲಯ


**ಕುಲಸಚಿವರು(ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ-577007**

**ದೂ.ಸಂಖ್ಯೆ: 08192-208420,208104**


ಸಂಖ್ಯೆ:ದಾವಿ:ಪವಿ:ಪಪ್ರ-81:2022-23:/5903 ದಿನಾಂಕ:08-02-2023

**:: ಪರೀಕ್ಷಾ ಪ್ರಕಟಣೆ::**

ವಿಷಯ: ಏಪ್ರಿಲ್-2023ರಲ್ಲಿ ನಡೆಯುವ ವಿವಿಧ ಸ್ನಾತಕೋತ್ತರ ಪದವಿಯ ಪ್ರಥಮ(ರಿಪೀಟರ್ಸ್) ಮತ್ತು ತೃತೀಯ(ರೆಗ್ಯುಲರ್) ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಅರ್ಜಿ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 06-02-2023

*****

ವಿಶ್ವವಿದ್ಯಾನಿಲಯವು ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ ವಿಭಾಗಗಳ/ ಅಧ್ಯಕ್ಷರು/ ಸಂಯೋಜನಾಧಿಕಾರಿಗಳು/ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಏಪ್ರಿಲ್-2023ರಲ್ಲಿ ನಡೆಯುವ ವಿವಿಧ ಸ್ನಾತಕೋತ್ತರ ಪದವಿಯ ಪ್ರಥಮ(ರಿಪೀಟರ್ಸ್) ಮತ್ತು ತೃತೀಯ(ರೆಗ್ಯುಲರ್) ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಅರ್ಜಿ ಶುಲ್ಕ ಪಾವತಿಸಲು ವಿದ್ಯಾರ್ಥಿಗಳಿಗೆ ಮಾಹಿತಿಗಳು/ಸಂದೇಶಗಳನ್ನು Web Portal / Mobile App ಮುಖಾಂತರ ಪಡೆಯಬಹುದಾಗಿರುತ್ತದೆ. ಪರೀಕ್ಷಾ ಶುಲ್ಕವನ್ನು ಡಿಜಿಟಲ್ ಮಾಧ್ಯಮದ ಮೂಲಕ ಸಂದಾಯ ಮಾಡುವುದು ಕಡ್ಡಾಯವಾಗಿದೆ. ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಕಳುಹಿಸಲಾಗುವುದು. **(ವೇಳಾಪಟ್ಟಿಯಲ್ಲಿ ನ್ಯೂನ್ಯತೆಗಳಿದ್ದಲ್ಲಿ ಪ್ರಕಟಣೆಯಾದ 03 ದಿನದೊಳಗೆ ಮಾಹಿತಿ ನೀಡುವುದು)**

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಆಯಾ ವಿಭಾಗಗಳ ಮುಖ್ಯಸ್ಥರು/ನಿರ್ದೇಶಕರು/ಸಂಯೋಜನಾಧಿಕಾರಿಗಳು/ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

**ತೃತೀಯ** ಸೆಮಿಸ್ಟರ್‌ನ ಹೊಸ ಪಠ್ಯಕ್ರಮದ ಎಂಬಿಎ ವಿದ್ಯಾರ್ಥಿಗಳಿಗೆ ಇಂಟರ್ ಡಿಸಿಪ್ಲಿನರಿ ಎಲೆಕ್ಟಿವ್ (Interdisciplinary Elective paper) ಪತ್ರಿಕೆಗೆ ಮಾತ್ರ ಪರೀಕ್ಷೆ ನಡೆಸಲಾಗುವುದು. ಎಂಬಿಎಗೆ ಸಂಬಂಧಪಟ್ಟ ರೆಗ್ಯುಲರ್ ವಿಷಯಗಳಿಗೆ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು. ಎಂಬಿಎ ಕೋರ್ಸ್‌ನ ಎಲ್ಲಾ ವಿದ್ಯಾರ್ಥಿಗಳು ಕೂಡ ಕೆಳಕಂಡ ದಿನಾಂಕಗಳಲ್ಲಿಯೇ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.

ಸ್ನಾತಕೋತ್ತರ ವಿಭಾಗಗಳ ಅಭ್ಯರ್ಥಿಗಳಿಗೆ ಆಯಾ ಅಧ್ಯಯನ ವಿಭಾಗಗಳನ್ನು ಪರೀಕ್ಷಾ ಕೇಂದ್ರಗಳನ್ನಾಗಿ ನಿಗಧಿಪಡಿಸಲಾಗಿದೆ.

**ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು**

| | | |
|---|---|---|
| 01. ದಂಡ ಶುಲ್ಕ ರಹಿತ | : | 10/02/2023 ರಿಂದ 20/02/2023 ರವರೆಗೆ |
| 02. ರೂ.120/- ದಂಡ ಶುಲ್ಕ ಸಹಿತ | : | 21/02/2023 ರಿಂದ 22/02/2023 ರವರೆಗೆ |
| 03. ರೂ..600/- ದಂಡ ಶುಲ್ಕ ಸಹಿತ | : | 23/02/2023 |

**ಸ್ನಾತಕೋತ್ತರ ಸೆಮಿಸ್ಟರ್ ಸ್ಕೀಂ ಪರೀಕ್ಷೆಗಳು**

**ವೃತ್ತಿಪರಕೋರ್ಸ್‌ಗಳಿಗೆ ಮಾತ್ರ (Chemistry/M.Ed./MP.Ed./M.B.A.)**

| ಕ್ರಮ ಸಂಖ್ಯೆ | ವಿವರ | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು |
|---|---|---|---|---|
| 01 | ಪರೀಕ್ಷಾ ಅರ್ಜಿಯ ಶುಲ್ಕ | ರೂ.100/- | ---- | ರೂ.100/- |
| 02 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಪ್ರತ್ಯೇಕವಾಗಿ) | ರೂ.1915/- | ರೂ.185/- | ರೂ.2100/- |
| 03 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) | ರೂ.375/- | ---- | ರೂ.375/- |
| 04 | ಸೆಮಿಸ್ಟರ್ ಒಂದು ಪ್ರಾಕ್ಟಿಕಲ್ ಪರೀಕ್ಷೆಗೆ | ರೂ.375/- | ---- | ರೂ.375/- |

## ಸ್ನಾತಕೋತ್ತರ ಸೆಮಿಸ್ಟರ್ ಸ್ಕೀಂನ ಪರೀಕ್ಷೆಗಳು

## ವೃತ್ತಿಪರವಲ್ಲದ ಕೋರ್ಸ್‌ಗಳಿಗೆ ಮಾತ್ರ

| ಕ್ರಮ ಸಂಖ್ಯೆ | ವಿವರಗಳು | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು |
|---|---|---|---|---|
| 01 | ಪರೀಕ್ಷಾ ಅರ್ಜಿಯ ಶುಲ್ಕ | ರೂ.100/- | ---- | ರೂ.100/- |
| 02 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಪ್ರತ್ಯೇಕವಾಗಿ) | ರೂ.1695/- | ರೂ.185/- | ರೂ.1880/ |
| 03 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) | ರೂ.375/- | ---- | ರೂ.375/- |
| 04 | ಸೆಮಿಸ್ಟರ್ ಒಂದು ಪ್ರಾಕ್ಟಿಕಲ್ ಪರೀಕ್ಷೆಗೆ | ರೂ.375/- | ---- | ರೂ.375/- |

| ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | ಸಾಮಾನ್ಯ (ರೂ) | ಪ.ಜಾ/ಪ.ಪಂ/ ಪ್ರವರ್ಗ-1(ರೂ) |
|---|---|---|
| | ರೂ.100/- | ರೂ.100/- |

## Challenging Valuation (ಸವಾಲಿನ ಮೌಲ್ಯಮಾಪನ)

| ಸವಾಲಿನ ಮೌಲ್ಯಮಾಪನಕ್ಕೆ ನಿಗದಿಪಡಿಸಿರುವ ಶುಲ್ಕ (ಫಲಿತಾಂಶ ಪ್ರಕಟಗೊಂಡ 10 ದಿನದೊಳಗಾಗಿ ಅರ್ಜಿ ಸಲ್ಲಿಸಬೇಕು) | ಪ್ರತಿ ಪತ್ರಿಕೆಗೆ ರೂ.2200/- |
|---|---|

## ::ವಿದ್ಯಾರ್ಥಿಗಳಿಗೆ ಸೂಚನೆ::

- **S.S.P** ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಬೇಕು.
- ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್. ಸಿ / ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು. ಮರುಯತ್ನದ (**Repeaters**) ಮತ್ತು ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿನಾಯಿತಿ ಇರುವುದಿಲ್ಲ.
- ಪ್ರವರ್ಗ-1ಕ್ಕೆ 2.5ಲಕ್ಷ ಹಾಗೂ ರೂ. 1ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟುಶುಲ್ಕ ಮರುಬರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಕಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ:ಸ.ಕ.ಇ./201/ಬಿ.ಎಂ.ಎಸ್.2011 ಬೆಂಗಳೂರು ದಿನಾಂಕ: 23-06-2012ರಲ್ಲಿ ತಿಳಿಸಿರುತ್ತಾರೆ.
- ವಿದ್ಯಾರ್ಥಿಗಳು Online ಮುಖಾಂತರ ಅರ್ಜಿ ಸಲ್ಲಿಸಲು studentportal.universitysolutions.in ನಲ್ಲಿ login ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
- ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿ ಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಳ್ಳಬೇಕು.
- ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಪ್ರಥಮ ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳುವುದು.
- ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಮರು ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ವಿಷಯಗಳ ಆಯ್ಕೆಯು ವಿದ್ಯಾರ್ಥಿಗೆ ಇರುವುದಿಲ್ಲ.
- ವಿದ್ಯಾರ್ಥಿಗಳು ಪ್ರವೇಶ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯಗಳನ್ನು ಖಚಿತ ಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕವನ್ನು ಪಾವತಿ ಮಾಡುವ ವಿಧಾನ.
- **ವಿದ್ಯಾರ್ಥಿಯು Web Portal ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು (Debit Card / Credit Card / Net Banking / Wallet, ಇತ್ಯಾದಿ) ಹಣ ಪಾವತಿಸಬಹುದು. ಈ ವಿಧಾನದಲ್ಲಿ ಸೇವಾ ಶುಲ್ಕವಿರುತ್ತದೆ.**

- ವಿದ್ಯಾರ್ಥಿಗಳು ತಮ್ಮ Web Portal ನಿಂದ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಸ್ವತಃ ಪಡೆಯಬಹುದು.
- ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಶೈಕ್ಷಣಿಕ ಅವಧಿ ಮುಗಿಯುವರೆಗೂ ತರಗತಿಗಳಿಗೆ ಹಾಜರಾಗಿ ನಿಯಮಾನುಸಾರ ಹಾಜರಾತಿ ಗಳಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ಪರೀಕ್ಷೆ ಬರೆಯಲು ಅನರ್ಹರು.

**ವಿಶೇಷ ಸೂಚನೆ: ವಿದ್ಯಾರ್ಥಿಗಳು Internet Browsing centerನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸುವ ಸಂದರ್ಭದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು ಹಾಗೂ ಎರಡು ಬಾರಿ ಶುಲ್ಕ ಪಾವತಿಸಿದ್ದಲ್ಲಿ ಮಾರುಪಾವತಿಗೆ(No Refund) ಅವಕಾಶ ಇರುವುದಿಲ್ಲ.**

- ಸವಾಲಿನ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು **ಪರೀಕ್ಷಾ ಫಲಿತಾಂಶ ಪ್ರಕಟಗೊಂಡ 10 ದಿನದೊಳಗಾಗಿ** ಪರೀಕ್ಷಾ ಶುಲ್ಕ ಪಾವತಿಸಬೇಕು.
- ಅಭ್ಯರ್ಥಿಯು ತೆಗೆದುಕೊಳ್ಳಲಿರುವ ಪತ್ರಿಕೆಯ ಕೋಡ್ ಹಾಗೂ **ಶೀರ್ಷಿಕೆಯನ್ನು** (Subject Title) ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
- ಈ ಅವಕಾಶವು ಸದರಿ ಕೋರ್ಸಿನ ಎರಡರಷ್ಟು ಅವಧಿಗೆ (Double the Duration) ಮಾತ್ರ ಅನ್ವಯಿಸುತ್ತದೆ.
- **ನವೆಂಬರ್ 2019ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ Double the Duration ಪ್ರಕಾರ ಅಕ್ಟೋಂಬರ್–2023ರ ಪರೀಕ್ಷೆ ಕಡೆಯ ಪರೀಕ್ಷೆಯಾಗಿದ್ದು ನಂತರದಲ್ಲಿ ನಡೆಯುವ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿರುವುದಿಲ್ಲ. ಒಂದು ವೇಳೆ ಪ್ರಸ್ತುತ ಸಾಲಿನಲ್ಲಿ ವಿಶೇಷ ಪರೀಕ್ಷೆಗೆ (Double the Duration) ಅನುಮತಿಸಿದ್ದಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಬಹುದು.**

## –:ಅಧ್ಯಕ್ಷರು/ಸಂಯೋಜನಾಧಿಕಾರಿಗಳು/ಪ್ರಾಚಾರ್ಯರಿಗೆ ಸೂಚನೆಗಳು:–

- ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು Web Portal ಮುಖಾಂತರ ಮಾಡಬೇಕು.
- ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ನೊಂದಣಿ ಸಂಖ್ಯೆ (Register No.) ಹಾಗೂ ಗುರುತಿನ ಸಂಖ್ಯೆ (Student ID) ತಯಾರು ಮಾಡಿ ಕಾಲೇಜುಗಳಿಗೆ ಅಂತರ್ಜಾಲದ ಮುಖಾಂತರ ಕಳುಹಿಸುವುದು.
- ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿ ಎಲ್ಲಾ ರೀತಿಯ ಅರ್ಹತೆಗಳು ಹೊಂದಿದ್ದಾರೆ ಎಂದು ಖಚಿತ ಪಡಿಸಿಕೊಳ್ಳಬೇಕು.
- Web Portal ಮುಖಾಂತರ ವಿದ್ಯಾರ್ಥಿಗಳ ಪರೀಕ್ಷೆ ಅರ್ಹತೆಯನ್ನು ದೃಢೀಕರಿಸಬೇಕು.
- Web Portal ಮುಖಾಂತರ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ರಿಯಾಯಿತಿಯ ಬಗ್ಗೆ ದೃಢೀಕರಿಸಬೇಕು.
- Web Portal ಮುಖಾಂತರ ವಿದ್ಯಾರ್ಥಿಗಳ ಪ್ರವೇಶ ಪತ್ರಿಕೆಯ ತಡೆಯ ಬಗ್ಗೆ ದೃಢೀಕರಿಸಬೇಕು.
- ಕಾಲೇಜು ದೃಢೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ Web Portal ಮುಖಾಂತರ ತಿಳಿಸಲಾಗುವುದು.
- Web Portal ಮುಖಾಂತರ ತಮ್ಮ ಕಾಲೇಜಿನ ಬ್ಯಾಂಕ್ ವಿವರಗಳನ್ನು ಒದಗಿಸಬೇಕು, ಇಲ್ಲವಾದಲ್ಲಿ ವಿದ್ಯಾರ್ಥಿಗಳಿಗೆ ಕಾಲೇಜಿನ ಬ್ಯಾಂಕ್‌ನಲ್ಲಿ ಪರೀಕ್ಷಾ ಶುಲ್ಕ ಪಾವತಿ ಮಾಡಲು ಅವಕಾಶವಿರುವುದಿಲ್ಲ.
- ಕಾಲೇಜುಗಳಿಗೆ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮಾಡಿದ ವಿವರಗಳು ಕಾಲೇಜಿನ Web Portal ನಲ್ಲಿ ಲಭ್ಯವಿರುತ್ತದೆ.
- ಕಾಲೇಜಿನ ಬ್ಯಾಂಕ್‌ನಲ್ಲಿ ವಿದ್ಯಾರ್ಥಿಗಳು ಸಂದಾಯ ಮಾಡಿದ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದೊಳಗೆ Payment Gateway ಮುಖಾಂತರ ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕು.
- ವಿಶ್ವವಿದ್ಯಾನಿಲಯವು ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಅಂತರ್‌ಜಾಲದ ಮುಖಾಂತರವೇ ವಿದ್ಯಾರ್ಥಿಗಳಿಗೆ ಒದಗಿಸುವುದು.
- ಅವಶ್ಯವಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಕಾಲೇಜುಗಳು ಮುದ್ರಿಸಿ ಒದಗಿಸತಕ್ಕದ್ದು.
- ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು Web Portal ಮುಖಾಂತರ ತಿಳಿಸುವುದು.ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಯವಿದ್ದರೆ ಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.
- ಕಾಲೇಜಿಗೆ ಸಂಬಂಧಪಟ್ಟ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಪಟ್ಟಿಯನ್ನು Web Portal ಮುಖಾಂತರ ಒದಗಿಸಲಾಗುವುದು.
- ಪ್ರಾಯೋಗಿಕ ಪರೀಕ್ಷೆಯ ತಯಾರಿಯನ್ನು ಕಾಲೇಜಿನ Web Portal ಮುಖಾಂತರವೇ ಮಾಡುವುದು.
- ಪ್ರಾಯೋಗಿಕ ಪರೀಕ್ಷೆಯ Batch Preparation ಹಾಗೂ ಅಂಕಗಳ ದಾಖಲಾತಿಯನ್ನು Web Portal ಮುಖಾಂತರವೇ ಮಾಡುವುದು.
- ಪರೀಕ್ಷಾ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಕೊಠಡಿಗಳನ್ನು (Room Allotment) ಆನ್‌ಲೈನ್ ಮೂಲಕ ನಿಗದಿಪಡಿಸಿಕೊಳ್ಳುವುದು.

- Invigilator Dairy ಯನ್ನು (02 ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ಧಪಡಿಸಿಕೊಳ್ಳಬೇಕು ಹಾಗೂ ಆಯಾ ದಿನದ ಉತ್ತರ ಪತ್ರಿಕೆ ಬಂಡಲ್ ಗಳ ಜೊತೆಯಲ್ಲಿಯೇ 01 ಪ್ರತಿಯನ್ನು ಕಳುಹಿಸಿಕೊಡುವುದು.
- ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಮತ್ತು ವಿಷಯವನ್ನು (QP Code) ಆನ್ ಲೈನ್ ಮೂಲಕವೇ ನಮೂದಿಸುವುದು.
- ಹೆಚ್ಚಿನ ಕಾಲೇಜುಗಳು ಕಳೆದ ಸಾಲಿನ ಪರೀಕ್ಷಾ ಶುಲ್ಕಗಳನ್ನು ಪಾವತಿಸದಿರುವುದನ್ನು ಗಮನಿಸಲಾಗಿದೆ ಆದ್ದರಿಂದ ಈ ಬಾರಿ ತಕ್ಷಣ ಕ್ರಮ ಜರುಗಿಸುವುದು.
- **ಆಂತರಿಕ ಅಂಕಗಳ ಮಾರ್ಕ್ಸ್ ಲೀಸ್ಟ್‌ಗಳನ್ನು ಕಡ್ಡಾಯವಾಗಿ ಸಮರ್ಪಕವಾಗಿ ಪರಿಶೀಲಿಸಿ 20.03.2023 ಮುಂಚೆಯೇ Online ಮುಖಾಂತರ ಸಲ್ಲಿಸಬೇಕು. ಫಲಿತಾಂಶ ನೀಡಿದ ನಂತರ ಯಾವುದೇ ತಿದ್ದುಪಡಿ/ ಮಾರ್ಪಾಡುಗಳಿಗೆ ಅವಕಾಶ ಇರುವುದಿಲ್ಲ.**
- ಮುದ್ರಿತ ನಮೂನೆಗಳು(ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ಸಹ **ದಿನಾಂಕ:13-03-2023** ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.
- ಪರೀಕ್ಷಾ ಫೀ ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಿ ನಂತರದಲ್ಲಿ ಫಲಿತಾಂಶ ಬಾರದ ಬಗ್ಗೆ ದೂರು ನೀಡುವುದನ್ನು ಗಮನಿಸಲಾಗಿದೆ.ಈ ಬಾರಿ ಇಂತಹ ಪ್ರಕರಣಗಳು ಬಾರದಂತೆ ಎಚ್ಚರವಹಿಸಬೇಕು. ಕಾರಣ, ಒಮ್ಮೆ ಪರೀಕ್ಷೆ ಬರೆಸಿದಲ್ಲಿ ಅಭ್ಯರ್ಥಿ ಪಟ್ಟಿಯಲ್ಲಿ ಇಲ್ಲದವರಫಲಿತಾಂಶ ನೀಡಲು ಅವಕಾಶವಿರದಂತೆ ಸಾಫ್ಟ್‌ವೇರ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಇದನ್ನು ತಿಳಿಸುವುದು.
- ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ಶೈಕ್ಷಣಿಕ ವಿಭಾಗದಿಂದ ಅನುಮೋದನೆಗೊಂಡ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರು ಪಡಿಸುವ ಹೊಣೆಯು ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ.ತಪ್ಪಿದಲ್ಲಿ ತಮ್ಮನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.
- ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು (Absentee Statement) ಪ್ರತ್ಯೇಕವಾಗಿ ಆಯಾ ದಿನದಂದೇ ವಿಶ್ವ ವಿದ್ಯಾನಿಲಯಕ್ಕೆ ಕಳುಹಿಸಬೇಕು.

**:ವಿಶೇಷ ಸೂಚನೆ:**

**1) ನವೆಂಬರ್ 2019ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ Double the Duration ಪ್ರಕಾರ ಅಕ್ಟೋಬರ್-2023ರ ಪರೀಕ್ಷೆ ಕಡೆಯ ಪರೀಕ್ಷೆಯಾಗಿದ್ದು ನಂತರದಲ್ಲಿ ನಡೆಯುವ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶವಿರುವುದಿಲ್ಲ.**

**2) ಈ ಹಿಂದಿನ ಸಾಲಿನಲ್ಲಿ ಪರೀಕ್ಷಾ ಶುಲ್ಕ ವಿನಾಯ್ತಿ ಪಡೆದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಮಂಜೂರಾದ ಹಣವನ್ನು ಕೂಡಲೇ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡದಿರುವುದು ಕಂಡುಬಂದಿರುತ್ತದೆ. ಮಂಜೂರಾದ ಹಣವನ್ನು ವಿವಿಗೆ ಪಾವತಿಸದೇ ಕಾಲೇಜಿನಲ್ಲೇ ಉಳಿಸಿಕೊಂಡಲ್ಲಿ ಇಂತಹ ಪ್ರಕರಣಗಳನ್ನು ಗಂಭೀರವೆಂದು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 6363341215, 6363337901 ಹಾಗೂ 6363351762 ಸಂಪರ್ಕಿಸಬಹುದು.**

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577007.

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕೋತ್ತರ/ವಿಭಾಗ/ಕಾಲೇಜುಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

1. ಸಮಾಜ ಕಲ್ಯಾಣ ಅಧಿಕಾರಿಗಳು, ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
3. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಉಪಕುಲಸಚಿವರು (ಪರೀಕ್ಷಾಂಗ), ಉಪಕುಲಸಚಿವರು(ಆಡಳಿತ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಪ್ರಾದೇಶಿಕ ಮುಖ್ಯಸ್ಥರು, ಲಾಜಿಸ್ಟಿಕ್, ದಾವಣಗೆರೆ.
7. ಕಛೇರಿ ಪ್ರತಿ.